ಶ್ರೀ ಡಿ.ಜಿ. ಬಸವನಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಕೊಟ್ಟಿರುವ ಉತ್ತರವನ್ನು ನೋಡಿದರೆ, ನಮ್ಮ ರಾಜ್ಯದ ವಿಸ್ತೀರ್ಣಕ್ಕೆ ಈಗ ಕೊಟ್ಟಿರುವ ಗುತ್ತಿಗೆಯು ಏನೇನೂ ಸಾಲದು. ನನಗೆ ಗೊತ್ತಿದ್ದ ಮಾಹಿತಿ ಪ್ರಕಾರ ನಮ್ಮ ರಾಜ್ಯದಲ್ಲಿ ೨೫ ಸಾವಿರ ಚದುರ ಕಿಲೋಮೀಟರ್ ಗ್ರಾನೈಟ್ ಸಂಗ್ರಹವಾಗಿದೆ. ಸರ್ಕಾರಿ ಒಡೆತನದ ಹಾಗೂ ಖಾಸಗಿ ವಲಯಗಳಿಗೆ ಕೊಟ್ಟಿರತಕ್ಕ ಗುತ್ತಿಗೆ ೮೦೦ ಚದುರ ಕಿಲೋಮೀಟರ್ ಮಾತ್ರ. ಗ್ರಾನೈಟ್ ಕಲ್ಲುಗಳಿಗೆ ಹೊರದೇಶಗಳಲ್ಲಿ ಅಲಂಕಾರ ವಸ್ತುಗಳನ್ನು ತಯಾರು ಮಾಡುವುದಕ್ಕೆ ಬಹಳ ಬೇಡಿಕೆ ಇದೆ. ಯಾವುದೇ ಸಂಸ್ಥೆಗಾಗಲೀ ಇವರು ಗ್ರಾನೈಟ್ ತೆಗೆಯುವುದಕ್ಕೆ ಗುತ್ತಿಗೆಯನ್ನು ಕೊಡುವುದು ಒಳ್ಳೆಯದು. ಇದರಿಂದ ನಮ್ಮ ರಾಜ್ಯಕ್ಕೂ ಹೆಚ್ಚಿಗೆ ಹಣ ಬರುತ್ತದೆ. ಹೊರದೇಶಗಳಿಂದಲೂ ಸಹಾ ಗ್ರಾನೈಟ್‌ಗಳಿಗೆ ಬಹಳ ಬೇಡಿಕೆ ಇದೆ. ಆದ್ದರಿಂದ ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ.ಎಸ್. ದೇಶ್‌ಮುಖ್.—ಮಾನ್ಯ ಅಧ್ಯಕ್ಷರೇ, ನಾವು ಈಗಾಗಲೇ ಗ್ರಾನೈಟ್‌ಗಳನ್ನು ತೆಗೆಯುವುದಕ್ಕೆ ೩,೩೩೧ ಹೆಕ್ಟೇರ್‌ನಷ್ಟು ಭೂಮಿಯನ್ನು ಗುತ್ತಿಗೆ ಕೊಟ್ಟಿದ್ದೇವೆ. ಸರ್ಕಾರಕ್ಕೆ ಇದರಿಂದ ಈಗಾಗಲೇ ಆದಾಯ ಬರುತ್ತಿದೆ. ಮಾನ್ಯ ಸದಸ್ಯರು ಇನ್ನೂ ಹೆಚ್ಚು ಗುತ್ತಿಗೆಯನ್ನು ಕೊಡಬೇಕೆಂದು ಹೇಳಿದ್ದಾರೆ. ಈ ವಿಷಯ ಸರ್ಕಾರದ ಮುಂದೆ ಇದೆ. ಆದಷ್ಟು ಬೇಗ ಇದರ ಬಗ್ಗೆ ವಿಚಾರ ಮಾಡುತ್ತೇನೆ.

ಚುಕ್ಕೆ ಪ್ರಶ್ನೆ ಸಂಖ್ಯೆ : ೯೬ (೨೮೫)

(ಮಾನ್ಯ ಸದಸ್ಯರಾದ ಶ್ರಿ ಚಂದ್ರಶೇಖರ್ ಮಾಮನಿಯವರು ಗೈರು ಹಾಜರಾಗಿದ್ದರು)

(ಚುಕ್ಕೆ ಪ್ರಶ್ನೆ ಸಂಖ್ಯೆ : ೯೭ (೩೯೦)

ಶ್ರೀ ಜೆ.ಹೆಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ಪ್ರಶ್ನೆಯು ಲೇಬರ್ ಡಿಪಾರ್ಟ್‌ಮೆಂಟಿಗೆ ಹೋಗಬೇಕಾಗಿದ್ದು, ನನಗೆ ಬಂದು ಬಿಟ್ಟಿದೆ, ಇದು ಶುಗರ್ ಇಂಡಸ್ಟ್ರೀಗೆ ಬಗ್ಗೆ ಹೇಳಬೇಕಾಗುತ್ತದೆ. ತಪ್ಪಾಗಿ ನನ್ನ ಬಳಿ ಬಂದಿದೆ. ತಾವು ಇವನ್ನು ವಿತ್‌ಹೋಲ್ಡ್ ಮಾಡಬೇಕು.

ಅಧ್ಯಕ್ಷರು.—ಈ ಪ್ರಶ್ನೆಯನ್ನು ವಿತ್‌ಹೋಲ್ಡ್ ಮಾಡಲಾಯಿತು.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು.

ವಿದ್ಯುದ್ದೀಕರಣ ಹೊಂದದ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವ ಬಗ್ಗೆ

ಸವದತ್ತಿ ತಾಲ್ಲೂಕು

೯೬ (೨೮೫) ಶ್ರೀ ಚಂದ್ರಶೇಖರ ಮಾಮನಿ (ಸವದತ್ತಿ).—ಮಾನ್ಯ ಕೈಗಾರಿಕೆ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ಸವದತ್ತಿ ತಾಲ್ಲೂಕಿನ ವಿದ್ಯುದ್ದೀಕರಣ ಹೊಂದದ ಗ್ರಾಮಗಳ ಸಂಖ್ಯೆ ಎಷ್ಟು ಹಾಗೂ ಅಂತಹ ಗ್ರಾಮಗಳಿಗೆ ವಿದ್ಯುಚ್ಛಕ್ತಿಯನ್ನು ಯಾವಾಗ ಒದಗಿಸಲಾಗುವುದು ?

ಆ) ಸವದತ್ತಿ ತಾಲ್ಲೂಕಿನ ಎಷ್ಟು ಗ್ರಾಮಗಳ ಹರಿಜನ ಹರಿಜನ-ಗಿರಿಜನ ಕಾಲೋನಿಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಬೇಕಾಗಿದೆ ಹಾಗೂ ಅಂತಹ ಕಾಲೋನಿಗಳಿಗೆ ವಿದ್ಯುಚ್ಛಕ್ತಿಯನ್ನು ಯಾವಾಗ ಒದಗಿಸಲಾಗುವುದು ?

ಇ) ಸರ್ಕಾರದ ಭಾಗ್ಯಜ್ಯೋತಿ ಯೋಜನೆಯ ಆಡಿಯಲ್ಲಿ ಸದರಿ ತಾಲ್ಲೂಕಿನ ಎಲ್ಲಾ ಹಳ್ಳಿಗಳಿಗೆ ವಿದ್ಯುತ್ ದೀಪಗಳನ್ನು ಒದಗಿಸಲಾಗಿದೆಯೇ, ಹಾಗಿಲ್ಲದಿದ್ದಲ್ಲಿ ಯಾವಾಗ ಒದಗಿಸಲಾಗುವುದು ?

ಈ) ತಾಲ್ಲೂಕಿನಲ್ಲಿ ಈ ಯೋಜನೆಯ ಲಾಭ ಪಡೆದ ಗ್ರಾಮಗಳೆಷ್ಟು ಮತ್ತು ಫಲಾನುಭವಿಗಳ ಸಂಖ್ಯೆ ಎಷ್ಟು ಹಾಗೂ ಗ್ರಾಮಪಾಲು ಪ್ರಕಾರ ಲಾಭ ಪಡೆದ ಫಲಾನುಭವಿಗಳ ಸಂಖ್ಯೆ ಎಷ್ಟು?

ಶ್ರೀ ಜೆ.ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುಚ್ಛಕ್ತಿ ಮಂತ್ರಿಗಳು).—

ಅ) ಎಲ್ಲಾ ಗ್ರಾಮಗಳಿಗೂ ವಿದ್ಯುಚ್ಛಕ್ತಿ ಸಂಪರ್ಕವನ್ನು ಒದಗಿಸಲಾಗಿದೆ.

ಆ) ಎಲ್ಲಾ ಹರಿಜನ ಗಿರಿಜನ ಕಾಲೋನಿಗಳಿಗೆ ವಿದ್ಯುತ್ ಒದಗಿಸಲಾಗಿದೆ.

ಇ) ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುಚ್ಛಕ್ತಿ ಒದಗಿಸಬೇಕಾದ ಗ್ರಾಮಗಳಿಲ್ಲ.

ಈ) ವಿವರ ಅನುಬಂಧದಲ್ಲಿ ಇಡಲಾಗಿದೆ.

ಅನುಬಂಧ

ಕ್ರಮ ಸಂಖ್ಯೆ	ಗ್ರಾಮದ ಹೆಸರು	ಫಲಾನು ಭವಿಗಳ ಸಂಖ್ಯೆ	ಕ್ರಮ ಸಂಖ್ಯೆ	ಗ್ರಾಮದ ಹೆಸರು	ಫಲಾನು ಭವಿಗಳ ಸಂಖ್ಯೆ
೧)	ಹೊಸೂರು	೪೪	೨)	ಮುರಗೋಡ್	೪೪
೩)	ಯರಗಟ್ಟಿ	೪೦	೪)	ಜಿಕ್ಕೊಪ್ಪ	೨೨
೫)	ಮಾರಕುಂಬಿ	೨೨	೬)	ಚಾಚಡಿ	೩೪
೭)	ಗೊರವಾಂಕೊಳ್ಳ	೨೨	೮)	ಇಂಚಲ್	೨೨
೯)	ಹುಲಿಕಆಪ್ಟಿ	೨೨	೧೦)	ಹಾಗುಗೊಪ್ಪ	೨೪
೧೧)	ಸಿರಸಂಗಿ	೨೪	೧೨)	ಮುಡಪಳ್ಳಿ	೨೪
೧೩)	ಕರಿಕಟ್ಟಿ	೨೪	೧೪)	ಮುನವಳ್ಳಿ	೪೬
೧೫)	ತಲ್ಲೂರ್	೨೪	೧೬)	ಸಂಗ್ರೆಸಕೊಪ್ಪ	೨೪
೧೭)	ಕಡಬಿ	೨೨	೧೮)	ಸೊವ್ವಲ್ಲ	೩೧
೧೯)	ಕುರವಿನಕೊಪ್ಪ	೨೨	೨೦)	ಬಿಡಸುರ್	೨೨
೨೧)	ಯಕ್ಕುಂಡಿ	೨೨	೨೨)	ಕರಲಕಟ್ಟಿ	೨೨
೨೩)	ಹಿರೆಕುಂಬಿ	೨೪	೨೪)	ಚುಕ್ಕುಂಬಿ	೨೪
೨೫)	ಏರೊಡ್ಡಿ	೨೨	೨೬)	ಹೊಲಿ	೨೪
೨೭)	ಏರೂರು	೧೨	೨೮)	ಹಂಚಿನಾಲ್	೩೪
೨೯)	ಉಗಾರ್‌ಗೊಲ್	೪೪	೩೦)	ಸಟ್ಟಿಗೇರಿ	೩೯
೩೧)	ರೈನಾಪುರ್	೨೪	೩೨)	ಯೆಟ್ರುವಿ	೨೨
೩೩)	ಅಸುಂಡಿ	೨೧	೩೪)	ಬಡ್ಲಿ	೨೨
೩೫)	ಚುಲಕಿ	೨೪	೩೬)	ಯೆರಗರವಿ	೨೨
೩೭)	ಮುಬನೂರ್	೨೪	೩೮)	ಹಿರೆಕೊಪ್ಪ	೨೨
೩೯)	ರುದ್ರಪುರ	೧೨	೪೦)	ಮುಂಟಪಾಡ್	೨೨
೪೧)	ಇಂಗ್ಲಗಿ	೧೨	೪೨)	ಇನಾಂಹೊಂಗ್ಲ	೩೪
೪೩)	ಬಾಳಿದೊಣಿ	೨೨	೪೪)	ಸಿಂಗಾರಕೊಪ್ಪ	೧೨
೪೫)	ಧೂಪದಾಲ್	೨೨	೪೬)	ಹರಳಾಪುರ	೨೨
೪೭)	ಸುಟಗಟ್ಟಿ	೨೧	೪೮)	ಹಿತ್ತಂಗಿ	೨೦
೪೯)	ಅಲದಕಟ್ಟಿ	೨೨	೫೦)	ಮೂಲೂರು	೨೪
೫೧)	ಕೊರೆಬಾಲ್	೨೨	೫೨)	ಕಟಮಳ್ಳಿ	೩೨
೫೩)	ಜಾಲಿಕಟ್ಟಿ	೧೨	೫೪)	ದುಂಡನಕೊಪ್ಪ	೧೨
೫೫)	ಮಾಡ್ಲೂರು	೨೪	೫೬)	ಕಾಗಿಹಾಲ್	೧೨
೫೭)	ಮೂತಳ್ಳಿ	೧೨	೫೮)	ಜಕಬಾಲ್	೧೨
೫೯)	ಹಲ್ಲೂರು	೧೨	೬೦)	ತಗ್ಗಿದಾಳ್	೧೨
೬೧)	ಬಂದರ್‌ಹಳ್ಳಿ	೧೦	೬೨)	ಯಣಗಿ	೧೦
೬೩)	ಕುರವಗಟ್ಟಿ	೨೦	೬೪)	ಪಾದಮಕೇರಿ	೨೦
೬೫)	ತಡಸಲೂರು	೨೨	೬೬)	ಕುಂಚರಮನಹಾಳ್	೧೨
೬೭)	ಕಟರಾಳ್	೨೨	೬೮)	ಸೂಗಲ್	೨೪
೬೯)	ಗುಟಮಾರ್	೧೨	೭೦)	ಕರಿಮಣಿ	೧೨
೭೧)	ಮುದಂಗೇರಿ	೨೦	೭೨)	ಕೊಡ್ಲಿಪಾಡ್	೨೦
೭೩)	ಬಾನನಲ್	೧೦	೭೪)	ಹರಳಕಟ್ಟಿ	೨೦
೭೫)	ಕಾಗವಾಡ್	೨೦	೭೬)	ಅಚಮಟ್ಟಿ	೨೦
೭೭)	ಹಾಳಗಾಳ	೨೦	೭೮)	ಹಲಕಿ	೧೦
೭೯)	ಹಿರೆಬುದನೂರ್	೧೦	೮೦)	ಚಿಕ್ಕಬೂದನೂರ್	೧೦
೮೧)	ಇಕ್ಕಲ್	೧೦	೮೨)	ಕೊರಳೊಪ್ಪ	೧೦

೧	೨	೩	೪	೫	೬
೮೩)	ಯೆರಜಾರ್ಲಿ	೧೦	೮೪)	ಹಿರೆಉಳ್ಳಿಗೆರೆ	೧೦
೮೫)	ಚಿಕ್ಕಉಳ್ಳಿಗೆರೆ	೧೦	೮೬)	ಮಣಿಕಟ್ಟಿ	೧೦
೮೭)	ಗೊಪನಕೊಪ್ಪ	೧೦	೮೮)	ಅಕ್ಕಿಸಾಗರ	೧೦
೮೯)	ಮುಳ್ಳಿಕೆರಿ	೧೦	೯೦)	ಯಕ್ಕೆರಿ	೧೦
೯೧)	ಆರ್ತಿಗಲ್	೧೦	೯೨)	ಬಾಸರ್ಗಿ	೧೦
೯೩)	ಬುಡಿಗೊಪ್ಪ	೧೦	೯೪)	ನುಗ್ಗನಟ್ಟಿ	೯
೯೫)	ತಾಮಲಗೇರಿ	೧೧	೯೬)	ಮುಗಳಿಹಾಳ	೨೦

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸಬಹುದಾದ ಪ್ರಶ್ನೋತ್ತರಗಳು.

ಶ್ರೀ ಎ. ಲಕ್ಷ್ಮಿಸಾಗರ್.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಪಟ್ಟಿಯನ್ನು ನಾನು ಸಭೆಯ ಮುಂದಿಡುತ್ತೇನೆ.

ಕರ್ನಾಟಕದಲ್ಲಿ ಕೈಗಾರಿಕಾ ಉದ್ದಿಮೆಗಳ ಸ್ಥಾಪನೆ

೯೯ (೮೬) ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಲ್).—ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಎಷ್ಟು ಕೈಗಾರಿಕಾ ಎಸ್ಟೇಟುಗಳಿವೆ?

ಆ) ಎಷ್ಟು ತಾಲ್ಲೂಕುಗಳಲ್ಲಿ ಹೊಸದಾಗಿ ಸ್ಥಾಪನೆ ಮಾಡಲು ಉದ್ದೇಶಿಸಲಾಗಿದೆ?

ಇ) ಕೋಲಾರ ಜಿಲ್ಲೆಯಲ್ಲಿ ಕೈಗಾರಿಕಾ ಎಸ್ಟೇಟು ಸ್ಥಾಪಿಸುವ ಉದ್ದೇಶವೇನಾದರೂ ಸರ್ಕಾರ ದವರಿಗಿದೆಯೆ?

ಈ) ಮುಳಬಾಗಲ್ ನಗರದಲ್ಲಿ ಕೈಗಾರಿಕಾ ಎಸ್ಟೇಟು ಸ್ಥಾಪನೆ ಯಾವ ಹಂತದಲ್ಲಿದೆ ?

ಶ್ರೀ ಜೆ. ಎಚ್. ಪಟೇಲ್ (ಕೈಗಾರಿಕಾ ಮತ್ತು ವಿದ್ಯುಚ್ಛಕ್ತಿ ಸಚಿವರು).—

ಅ) ರಾಜ್ಯದಲ್ಲಿ ೬೧ ತಾಲ್ಲೂಕುಗಳಲ್ಲಿ ೭೯ ಕೈಗಾರಿಕಾ ವಸಾಹತುಗಳು ಸ್ಥಾಪಿತವಾಗಿದೆ.

ಆ) ಐದು ತಾಲ್ಲೂಕುಗಳಲ್ಲಿ ಹೊಸದಾಗಿ ೮ ಕೈಗಾರಿಕಾ ವಸಾಹತುಗಳನ್ನು ೮೬-೮೭ ರಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ.

ಇ) ಈಗಾಗಲೇ ಕೋಲಾರ ಜಿಲ್ಲೆಯಲ್ಲಿ ೫ ಸ್ಥಳಗಳಲ್ಲಿ ಕೈಗಾರಿಕಾ ಎಸ್ಟೇಟುಗಳನ್ನು ಸ್ಥಾಪಿಸಿದೆ.

ಈ) ಮುಳಬಾಗಲ್‌ನಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶ ಅಭಿವೃದ್ಧಿ ಮಂಡಳಿಯವರಿಂದ ಪಡೆದ ೫ ಎಕರೆ ಜಮೀನಿನಲ್ಲಿ ೪ ಡಿ ಮಾದರಿ ಷೆಡ್ಡು ಹಾಗೂ ೪ ಸ್ಮಾಲ್ ಎಸ್ ಮಾದರಿ ಕೈಗಾರಿಕಾ ಷೆಡ್ಡುಗಳನ್ನು ನಿರ್ಮಿಸಲು ಉದ್ದೇಶಿಸಲಾಗಿದೆ.

ಉದ್ದಿಮೆಗಳಿಗೆ ಬಡ್ಡಿ ರಹಿತ ಸಾಲವನ್ನು ನೀಡುವ ಬಗ್ಗೆ

೧೦೧ (೧೦೦) ಶ್ರೀ ಕೆ. ಸೆಟ್. ಪಾಟೀಲ್ (ಗದಗ).—ವಾಣಿಜ್ಯ, ಕೈಗಾರಿಕೆ ಮತ್ತು ವಿದ್ಯುತ್‌ಶಕ್ತಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ಸರ್ಕಾರದವರ ವಚನದಂತೆ ಉದ್ದಿಮೆಗಳಿಗೆ ಬಡ್ಡಿರಹಿತ ಸಾಲ ಕೇಳಿ ಅದು ಮಂಜೂರಾಗಿದ್ದರೂ ಹಣದ ಕೊರತೆಯಿಂದ ಸಾಲ ನೀಡುವುದನ್ನು ಮುಂದೆ ಹಾಕುತ್ತಿರುವುದು ನಿಜವೇ?